

2

# ಅಮರತ್ವ

ನನ್ನ ಮುತ್ತಾತನ ಕಾಲದ
ಕತ್ತಿಯೊಂದು ನಮ್ಮ ಬಳಿ ಇನ್ನೂ ಇದೆ
ಏಸೋ ಎಳೆಯ ಕೋಣ ಹೋತ ಹುಂಜಗಳ
ತಲೆಗಡಿದು
ಮಸೆದಷ್ಟೂ ಝಳಪುತಾ
ಆ ಅದೇ ಹರಿತದಲಿ
ಹಾಗೇ ಇದೆ
ಬಹುಶಃ
ನನ್ನ ನಂತರ ನನ್ನ ಮಗ ಅವನ ಮಗನ ಮಕ್ಕಳ
ಮನೆಯಲ್ಲೂ ಮೆರೆಯಲಿದೆ ಮೊನೆಯೂರಿ

ನಾವು
ಅಷ್ಟಾದರೂ
ಅಮರತ್ವ ಪಡೆದು ಬಂದಿಲ್ಲ

ಮರಣ..
ಬಾಯಿ ರುಚಿಯಲ್ಲೇ ಅಡಗಿದೆ
ಇದ ತಿಳಿವ ಮೊದಲು
ಮತ್ತೊಂದು ರುಂಡ ಮುಂಡವಗಲಿದೆ
ನಾಲಗೆ ನೆತ್ತರಿಗೆ ಚಾಚಿವೆ...

3

# ಎಷ್ಟೊಂದು ಮುಖಗಳಿವೆ ಇಲ್ಲಿ...

ಎಷ್ಟೊಂದು ಮುಖಗಳಿವೆ ಇಲ್ಲಿ ಕುಡಿ ನೋಟ ನಮ್ಮದು ಯಾರಿಗೆ
ಎಷ್ಟೊಂದು ಹೃದಯಗಳಿವೆ ಇಲ್ಲಿ ಹಿಡಿ ಪ್ರೀತಿ ನಮ್ಮದು ಯಾರಿಗೆ

ದೇವರನು ಹೊರ ಓಡಿಸಿ ಮಂದಿರ ಮಸೀದಿಗಳ ಕಟ್ಟಿ ಕೆಡವಿದೆವು
ಎಷ್ಟೊಂದು ನೆತ್ತರುಂಡ ಕಲ್ಲು ಬಿದ್ದಿವೆ ಇಲ್ಲಿ ಭಕ್ತಿ ನಮ್ಮದು ಯಾರಿಗೆ

ಹೂಮಾಲೆ ಎಂಬುದು ಎಳೆಯ ಹೂಹೆಣಗಳ ಪೋಣಿಸಿದ ದಂಡೆ
ಎಷ್ಟೊಂದು ಕಮರಿರುವ ಹೂಬನವಿವೆ ಇಲ್ಲಿ ಪಸೆ ನಮ್ಮದು ಯಾರಿಗೆ

ಮಾತು ಮಾತುಗಳಲೇ ಮಾರಾಟವಾಗುವ ಮುಗ್ಧರಣ್ಣಾ ನಾವುಗಳು
ಎಷ್ಟೊಂದು ಮೌನ ಕೊರಳಿವೆ ಇಲ್ಲಿ ಕೂರ್ಪಸೊಲ್ಲು ನಮ್ಮದು ಯಾರಿಗೆ

ನೆರೆಯಿಂದ ಹೋದುದಕಿಂತ ದೊರೆಯಿಂದ ಹೋದುದೇ ಭಾಳ ಇಲ್ಲಿ
ಎಷ್ಟೊಂದು ಮೂಕ ಪೆಟ್ಟು ಬಿದ್ದಿವೆ ಇಲ್ಲಿ ಜೈಕಾರ ನಮ್ಮದು ಯಾರಿಗೆ

ನೂರು ಮತದ ಜಿಗುಟು ಬಲೆಯಲಿ ನಾವೇ ಸಿಲುಕಿದ ಬೇಟೆಯು 'ಸಾಕ್ಷಿ'
ಎಷ್ಟೊಂದು ಬೇಟೆಗಾರು ಹೊಂಚಿರುವರು ಇಲ್ಲಿ ಒಮ್ಮತವು ನಮ್ಮದು ಯಾರಿಗೆ

